ಅರಿವಿಲ್ಲದೆ, "ಮ್ ಹೌದು" ಎಂದು ಉತ್ತರಿಸಿದೆ.

"ಮನಸ್ಸೊಳಗೆ ಏನೋ ಅಂದುಕೋತೀರಾ, ಆದರೆ ಬೇರೆ ಏನನ್ನೋ ಹೇಳ್ತೀದ್ದೀರಾ!..."

'ಅಯ್ಯೋ ಇವನ ಬಗ್ಗೆ ಅಂದುಕೊಂಡದ್ದೆಲ್ಲಾ ಗೊತ್ತಾಗಿರುತ್ತೋ?'

"ಯೂ ಥಿಂಕ್ ಅಲೌಡ್" ಎಂದ.

ಟೀವಿ ಷೋನಲ್ಲಿ, ನೀವು ಮನಸ್ಸಿನಲ್ಲಿ ಯಾವುದಾದರೂ ನಂಬರನ್ನು ಇಟ್ಟುಕೊಳ್ಳಿ ಎಂದು ಹೇಳಿ, ಆ ನಂಬರ್ ಬರೆದ ಚೀಟಿಯನ್ನು ಎತ್ತಿಕೊಡುವ ಕೋಟು ಸೂಟು ಧರಿಸಿದ ಜಾದೂಗಾರನಂತೆ ಕಾಣುವ ಇವನಿಗೆ ಟೋಪಿ, ಕೈಯಲ್ಲೊಂದು ಮಂತ್ರದಂಡ ಮಾತ್ರವೇ ಮಿಸ್ಸಿಂಗ್.

ಒಳ್ಳೆಯ ಸಮಯಕ್ಕೆ ಕಾಫೀ ಬಂತು. ಮಗ್ಗನ್ನು ಎರಡು ಕೈಗಳಿಂದಲೂ ಹಿಡಿದು ಇನ್ನು ಮಾತನ್ನು ನಿಲ್ಲಿಸುತ್ತಾನೆ ಎಂಬ ನಂಬಿಕೆಯಲ್ಲಿ ಕುಡಿಯಲು ತೊಡಗಿದೆ.

"ಕಾಫೀ ಮಗ್ಗನ್ನು ಹೀಗೇ ಹಿಡಿಯುತ್ತೀರಾ? ನಿಮ್ಮ ಮನೆಯಲ್ಲಿ ಸಣ್ಣ ಮಗು ಇದೆಯೇ?"

"ಹಾ... ಹಾ ಯಾಕೆ?"

"ಮಗುವಿಗೆ ಹೀಗೆ ಹಿಡಿಯಲು ಕಲಿಸಿಕೊಡುತ್ತಾರೆ. ಅದಕ್ಕೇ ಕೇಳಿದೆ" ಎಂದ.

"ಓ..." ಎಂದು ಒಂದು ಪದದಲ್ಲಿ ಹೇಳಿಮುಗಿಸುವಾಗ, "ಕಾಫೀ ಚೆನ್ನಾಗಿದೆಯೇ?" ಎಂದು ಕೇಳಿದ.

"ಕಳಪೆ..."

"ನಾನು ಹೇಳಿದೆನಲ್ಲಾ, ಇಲ್ಲಿ ಇದು ಚೆನ್ನಾಗಿರೋದಿಲ್ಲಾಂತ. ನಾನು ನಿನ್ನೆ ಇದೇ ಕಳಪೆಯನ್ನೇ ಕುಡಿದೆ."

ಏನೋ ಒಂದು ಆಕರ್ಷಣೆ ಇವನ ಬಳಿ. ಮಾತು ಚುರುಕಾಗಿದ್ದರೂ, ಇವನು ಗೇರುಬೀಜದ ಥರಾ ಕಾಣುತ್ತಿಲ್ಲ. ಅಥವಾ ಹಾಗೆ ಯಾಕೆ ತೋಚುತ್ತಿಲ್ಲ? ಎಂಬ ಆಲೋಚನೆಯನ್ನು ತಾತ್ಕಾಲಿಕವಾಗಿ ಬದಿಗಿಟ್ಟೆ.

ಸಮಯ ಸಿಕ್ಕಾಗ ಗುಬ್ಬಚ್ಚಿ ಮೆದುಳನ್ನು ಕೆದಕಬಹುದು. ಆದರೆ ತಲೆಯೊಳಗೆ ಹೊಡೆಯುತ್ತಿದ್ದ ಸುರಕ್ಷತೆಯ ಅಲಾರಾಮಿನ ಶಬ್ದ ಕಡಿಮೆಯಾದಂತೆ ತೋರಿತು.

"ಆಕ್ಚುಯಲಿ, ಈ ಕಾಫೀ ಶಾಪಿನ ಕಾಫೀ ಟೇಸ್ಟ್ ಎಲ್ಲಾ ಪರದೇಶದ ನಾಲಿಗೆಗೆ ಸರಿ. ನಾವು ನಮ್ಮ ಟೇಸ್ಟಿಗೆ ತಕ್ಕಂತೆ ಆರ್ಡರ್ ಮಾಡಬೇಕು..."

"ಮ್..."

"ಈಗ ಕೋಲ್ಡ್ ಕಾಫೀಯನ್ನೇ ತೆಗೆದುಕೊಳ್ಳಿ, ಬಹುಪಾಲು ಲೈಟಾಗೆ ಇರುತ್ತೆ. ಸಿಂಗಲ್ ಶಾಟ್‌ಗೆ ಬದಲು ಡಬಲ್ ಶಾಟ್ ಎಕ್ಸ್‌ಪ್ರೆಸ್ಸೋ ಹಾಕೋದಿಕ್ಕೆ ಹೇಳಿ, ಸೂಪರಾಗಿರುತ್ತೆ..."

ಹೇಗೆ, ಯಾರು ಎಂದು ತಿಳಿಯದ ಒಬ್ಬ ಹೆಣ್ಣಿನ ಬಳಿ, ತನಗೆ ತಿಳಿದದ್ದೆಲ್ಲವನ್ನೂ ಈ ಗಂಡಸರಿಂದ ಬಡಬಡಿಸಲು ಹೇಗೆ ಸಾಧ್ಯ? ಇವನೂ ಎಲ್ಲರಂತೆ ಜೊಲ್ಲು ಪಾರ್ಟೀನೇ ಎಂದು ಸುಲಭವಾಗಿ ಹೇಳಬಹುದು. ಆದರೆ, ಹಾಳಾದ ಕಾಫಿಗಿಂತ ಅವನ ಮಾತು ಸ್ವಲ್ಪ ಸ್ವಾರಸ್ಯವಾಗೇ ಇತ್ತು.

ಅವನ ಮಾತಿನ ಇಪ್ಪತ್ತು ನಿಮಿಷಗಳು ಕಾಫಿಯಲ್ಲಿ ಒಂದು ಮಿನಿ ಸ್ನಾನ ಮಾಡಿದಂತೆ ಇತ್ತು. ಇವನು ಕಾಫಿಯ ಬಗ್ಗೆ ಬಹಳ ಓದಿಕೊಂಡಿರಬೇಕು. ಅಥವಾ, ಕಾಫೀ ಶಾಪಿನಲ್ಲಿ ಕೆಲಸ ಮಾಡಿರಬೇಕು.